

'ಬಳ್ಳಿಗೆ ಹೂವು ಭಾರವೇ' ಎನ್ನುವ ಮಾತು ಇತ್ತೀಚಿನವರೆಗೂ ಭಾರತೀಯ ಸಂದರ್ಭಕ್ಕೆ ಹೆಚ್ಚು ಅನ್ವಯಿಸುತ್ತಿರಲಿಲ್ಲ. ಆದರೆ, ಬದಲಾದ ಸಂದರ್ಭದಲ್ಲಿ ಮಡಿಲ ಹೂ ಭಾರವೆನ್ನಿಸುತ್ತಿದೆ. ಮಕ್ಕಳನ್ನು ಸಾಕುವುದು ಸುಲಭವಾದ, ಸಹಜವಾದ ಸಂಗತಿಯಾಗಿ ಈಗ ಉಳಿದಿಲ್ಲ.

ಮಡಿಲ ಕೂಸುಗಳನ್ನು ಸಾಕುವ ಕಷ್ಟ ಮೇಘನಾ ಅವರಿಗೆ ಸೀಮಿತವಾದ ಸವಾಲಲ್ಲ. ಎಲ್ಲ ತಂದೆತಾಯಿಯೂ, ವಿಶೇಷವಾಗಿ ತಾಯಿ ಎದುರಿಸಲೇಬೇಕಾದ ಅಗ್ನಿದಿವ್ಯವಿದು. ನೀವು ಯಾವ ವಯಸ್ಸಿನ ಮಕ್ಕಳ ಪೋಷಕರೇ ಆಗಿರಲಿ, ಜೀವನದ ಹತ್ತಾರು ಸಂದರ್ಭಗಳಲ್ಲಿ ಈ ಮಕ್ಕಳನ್ನು ಸಾಕುವ ಕಷ್ಟ ಸಾಕಪ್ಪಾ ಸಾಕು ಎಂದು ಒಮ್ಮೆಯಾದರೂ ಅನ್ನಿಸಿರಲೇಬೇಕು. ಮಕ್ಕಳ ಮುಖದಲ್ಲಿ ಮಂದಹಾಸವನ್ನು ನೋಡುವಾಗ ಎದೆತುಂಬಿ ಖುಷಿಯೆನಿಸುವುದು ನಿಜವಾದರೂ, ಅದಕ್ಕಾಗಿ ಪೋಷಕರು ಪಡಬೇಕಾದ ಪಾಡು ಬಹಳ ದೀರ್ಘವಾದುದು. ಇತ್ತೀಚೆಗಿನ ಒಂದೆರಡು ದಶಕಗಳಲ್ಲಿ ಪೋಷಕರಾದ ಎಲ್ಲರಿಗೂ ಈ ರೀತಿ ಅನ್ನಿಸಿರಬಹುದು.

'ಬಳ್ಳಿಗೆ ಹೂವು ಭಾರವೇ' ಎನ್ನುವ ಮಾತು ಇತ್ತೀಚಿನವರೆಗೂ ಭಾರತೀಯ ಸಂದರ್ಭಕ್ಕೆ ಹೆಚ್ಚು ಅನ್ವಯಿಸುತ್ತಿರಲಿಲ್ಲ. ಆದರೆ, ಬದಲಾದ ಸಂದರ್ಭದಲ್ಲಿ ಮಡಿಲ ಹೂ ಭಾರವೆನ್ನಿಸುತ್ತಿದೆ. ಮಕ್ಕಳನ್ನು ಸಾಕುವುದು ಸುಲಭವಾದ, ಸಹಜವಾದ ಸಂಗತಿಯಾಗಿ ಈಗ ಉಳಿದಿಲ್ಲ. ಹಣವೊಂದಿದ್ದರೆ ಏನನ್ನು ಬೇಕಾದರೂ ಪಡೆಯಬಹುದು ಎನ್ನುವ ಮನೋಭಾವ ಕೆಲವರಲ್ಲಿದೆ. ಆದರೆ, ಮಕ್ಕಳ ಅಗತ್ಯಗಳನ್ನು ಪೂರೈಸುವುದಕ್ಕೆ ಕೇವಲ ಹಣವೊಂದಿದ್ದರೆ ಸಾಲದು. ಇಷ್ಟಕ್ಕೂ ಅಗತ್ಯಗಳೆನ್ನುವುದು ಯಾವತ್ತೂ ವಸ್ತುವನ್ನು ಅವಲಂಬಿಸಿರುವುದಿಲ್ಲ. ಒಂದು ವಸ್ತುವನ್ನು ನಾವು ಸ್ವೀಕರಿಸಿದಾಗ ಮನಸ್ಸಿನಲ್ಲಿ ಹಾದು ಹೋಗುವ ಭಾವನೆಗಳೇನು ಎಂಬುದರ ಮೇಲೆ ಅಗತ್ಯವು ಪೂರೈಕೆಯಾಯಿತೇ ಎನ್ನುವುದು ನಿರ್ಧಾರವಾಗುತ್ತದೆ. ಉದಾಹರಣೆಗೆ, ಏಳನೇ ಕ್ಲಾಸಿನ ಸನತ್‌ಗೆ ಒಂದು ಜಾಮಿಟ್ರಿ ಬಾಕ್ಸ್ ಬೇಕಿದೆ ಎಂದಿಟ್ಟುಕೊಳ್ಳೋಣ. ಅಪ್ಪ ಅವನಿಗೊಂದು ಜಾಮಿಟ್ರಿ ಬಾಕ್ಸ್ ಕೊಡಿಸಿದರೆ ಅವನು ಖುಷಿಯಾಗಿ ಕುಣಿಯುತ್ತ ಶಾಲೆಗೆ ಹೋಗುತ್ತಾನೆಯೇ? 'ಹೋಗುತ್ತಾನೆ' ಎಂದು ಅಪ್ಪ–ಅಮ್ಮ ಎದೆತಟ್ಟಿ ಹೇಳುವಂತಿಲ್ಲ. 'ಅದು ಹೀಗೆಯೇ ಇರಬೇಕಿತ್ತು, ಅದು ಇಷ್ಟು ದಿನಗಳೊಳಗೆ ಸಿಗಬೇಕಿತ್ತು, ಬಣ್ಣ ಮತ್ತೊಂದಿರಬೇಕಿತ್ತು' ಎಂಬ ಹೆಚ್ಚುವರಿ ಭಾವನೆಗಳೋ ಅಥವಾ ಇನ್ನೇನೋ ಬೇಸರವೋ ನುಸುಳಿಕೊಂಡು ಅವನ ಖುಷಿಯ ಪ್ರಮಾಣವೂ ಸಾಪೇಕ್ಷವಾಗಿಬಿಡುತ್ತದೆ. ಆದ್ದರಿಂದ ಮಕ್ಕಳನ್ನು ಸಾಕುವ ಹೊಣೆಗಾರಿಕೆಗೆ ಏಕರೂಪದ ಸೂತ್ರವೊಂದು ಖಂಡಿತಾ ಇಲ್ಲ.

ಹಿಂದಿನ ಕಾಲದಲ್ಲಿ ಮನೆಯಲ್ಲಿ ಅಜ್ಜ ಅಜ್ಜಿ, ದೊಡ್ಡಪ್ಪ ಚಿಕ್ಕಪ್ಪ ಅಥವಾ ಮಾವ... ಹೀಗೆ ಸಂಬಂಧಿಕರು ಜೊತೆಯಾಗಿ ಇರುತ್ತಿದ್ದರು. ನೆರೆಹೊರೆಯವರೂ ಕಷ್ಟಸುಖಗಳಿಗೆ ಓ ಎನ್ನುತ್ತಿದ್ದರು. ಒಂದು ಕುಟುಂಬದ ಕೂಸು ಆ ಮನೆಯ ಮಗುವಷ್ಟೇ ಆಗಿರದೆ, 'ಎಲ್ಲರ ಮನೆಯ ನಗು'ವಾಗಿ ಬೆಳೆಯುತ್ತಿತ್ತು. ಆದರೆ ಮೇಘನಾಳ ಪಾಲಿಗೆ, ಅವಳ ತಲೆಮಾರಿನ ತಾಯಂದಿರಿಗೆ ಅಂತಹ ಅವಕಾಶವಿಲ್ಲ. ಅಲ್ಟ್ರಾ ನ್ಯೂಕ್ಲಿಯರ್ ಫ್ಯಾಮಿಲಿಯನ್ನು ಕಟ್ಟಿಕೊಂಡಿರುವ ತಲೆಮಾರಿನ ತಾಯಿಯರಿಗೆ ಬಾಣಂತಿಯಾಗಿರುವಾಗ ಸಿಗಬೇಕಾದ ಭಾವನಾತ್ಮಕ ಆಸರೆಯು ದೊರೆಯುವುದಿಲ್ಲ. ಜ್ವರ ಬಂದಿರುವ ಮಗುವಿನ ಆರೈಕೆ ಮಾಡಿ ಹತಾಶೆಯ ಸ್ಥಿತಿ ತಲುಪಿದಾಗ ಒಂದಿಷ್ಟು ಹೊತ್ತು ಅತ್ತು ನಿರಾಳವಾಗುವುದಕ್ಕೆ ಮನೆಯಲ್ಲಿ ಜೊತೆಯಿಲ್ಲದೆ ಮೇಘನಾ ದಣಿಯುತ್ತಾಳೆ. 'ಒಂದು ಮಗುವನ್ನು ಸಾಕುವ ಈ ದುಸ್ತರವನ್ನು ಕಂಡು ಇನ್ನೊಂದು ಮಗು ಖಂಡಿತಾ ಬೇಡ ಎನಿಸುತ್ತದೆ' ಎಂದು ಆಕೆ ಬೇಸರದಿಂದ ಹೇಳುತ್ತಾಳೆ.

## ಇದೊಂದು ಜಾಗತಿಕ ಸವಾಲು

ಮಕ್ಕಳನ್ನು ಸಾಕುವ ಹೊಣೆಗಾರಿಕೆ ಭಾರವೆನ್ನಿಸುತ್ತಿರುವುದು ಭಾರತೀಯರಿಗೆ ಮಾತ್ರವಲ್ಲ. ಇದೊಂದು ಜಾಗತಿಕ ವಿದ್ಯಮಾನ. ಮಕ್ಕಳನ್ನು ಸಾಕುವ ಕಷ್ಟ ಸಾಕೋ ಸಾಕು ಎಂಬ ಭಾವನೆಯನ್ನು ಅಮೆರಿಕ ಮತ್ತು ಕೆನಡಾದ ಪೋಷಕರೂ ವ್ಯಕ್ತಪಡಿಸುತ್ತಾರೆ. ಅಭಿವೃದ್ಧಿ ಹೊಂದಿದ ದೇಶಗಳು, ಅಭಿವೃದ್ಧಿ ಹೊಂದುತ್ತಿರುವ ದೇಶಗಳೆಂಬ ಭೇದಭಾವವಿಲ್ಲದೆ ಪೋಷಕರು ಏಕರೂಪದ ಹೊಣೆಗಾರಿಕೆಯ ಭಾರವನ್ನು ಹೊರುವುದು ಅನಿವಾರ್ಯವಾಗಿದೆ. 'ಬ್ಯುಸಿನೆಸ್ ಪರ್ಫಾರ್ಮೆನ್ಸ್ ಇನ್ನೊವೇಶನ್ ನೆಟ್‌ವರ್ಕ್' ನಡೆಸಿದ ಸರ್ವೆಯಲ್ಲಿ, ನಾವು ಮಕ್ಕಳಾಗಿದ್ದಾಗ ಬೆಳೆದ ಶೈಲಿಗೂ, ಪ್ರಸ್ತುತ ಮಕ್ಕಳನ್ನು ಬೆಳೆಸುವ ಶೈಲಿಗೂ ತುಂಬಾ ವ್ಯತ್ಯಾಸವಿದೆ ಎಂದು ಶೇ. 88ರಷ್ಟು ಪೋಷಕರು ಅಭಿಪ್ರಾಯಪಟ್ಟಿದ್ದಾರೆ. 'ಪಾಲನೆ ಪೋಷಣೆ' ಹಿಂದೆಗಿಂತ ಇಂದಿನ ದಿನಗಳಲ್ಲಿ